ಅ) ಅತಿವೃಷ್ಟಿಯಿಂದ ಹಾನಿಗೊಳಗಾದ ರೈತರ ಬೆಳೆಗೆ ಸರ್ಕಾರವು ಪ್ರತಿ ಹೆಕ್ಟೇರಿಗೆ ನಿಗಧಿ ಮಾಡಿರುವ ಸಹಾಯ ಧನದೇ ಮೊತ್ತವೆಷ್ಟು ?

ಆ) ಹಾಗಿದ್ದಲ್ಲಿ, ಈಗಿನ ರಾಸಾಯನಿಕ ಗೊಬ್ಬರದ ಅತೀವ ಬೆಲೆ ಏರಿಕೆ ಮತ್ತು ಮಿತಿಮೀರಿದ ವ್ಯವಸಾಯದ ಖರ್ಚನ್ನು ಸರ್ಕಾರವು ಗಮನಿಸಿದೆಯೇ ?

ಇ) ಹಾಗಿದ್ದಲ್ಲಿ, ಸರ್ಕಾರವು ಅತಿವೃಷ್ಟಿಯಿಂದ ಹಾನಗೊಳಗಾದ ರೈತರ ಬೆಳೆಗೆ ಸೂಕ್ತ ಸಹಾಯ ಒದಗಿಸಿ ಪರಿಹಾರ ಧನ ಹೆಚ್ಚಿಸಲು ಕ್ರಮ ಕೈಗೊಳ್ಳುವುದೇ ?

ಈ) ಈ ಬಗ್ಗೆ ಸರ್ಕಾರದ ಕ್ರಮಗಳೇನು ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ಹಾನಿಗೊಳಗಾದ ಪ್ರತಿ ಹೆಕ್ಟೇರ್ ಬೆಳೆಗೆ 500.00 ರೂಪಾಯಿಗಳ ಬೆಲೆಯ ವ್ಯವಸಾಯದ ಸಾಮಗ್ರಿಗಳನ್ನು ರೈತರಿಗೆ ನೀಡಲಾಗುತ್ತಿದೆ.

ಆ) ಗಮನಿಸಿದೆ.

ಇ) ಈಗಾಗಲೇ ಸರ್ಕಾರವು ಹಾನಿಗೊಳಗಾದ ಪ್ರತಿ ಹೆಕ್ಟೇರ್ ಬೆಳೆಗೆ ವ್ಯವಸಾಯ ಸಾಮಗ್ರಿಗಳ ರೂಪದಲ್ಲಿ ನೀಡುವ ಪರಿಹಾರವನ್ನು ರೂ.300 ದಿಂದ ರೂ. 500 ಕ್ಕೆ ದಿನಾಂಕ 4.12.92ರಿಂದ ಏರಿಸಲಾಗಿದೆ.

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರತಿ ಹಳ್ಳಿಗಳಲ್ಲೂ ಸ್ಮಶಾನಕ್ಕೆ ಜಾಗ ನಿಗಧಿ.

387- ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರತಿ ಹಳ್ಳಿಗಳಲ್ಲಿ ಸ್ಮಶಾನಕ್ಕೆ ಜಾಗ ನಿಗಧಿ ಮಾಡಲು ಸರ್ಕಾರವು ಕ್ರಮ ಕೈಗೊಂಡಿದೆಯೇ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ಸರ್ಕಾರವು ಈ ಹಿಂದೆ ಎಲ್ಲಾ ಕೋಮಿನ ಜನಾಂಗದವರಿಗೂ ಸ್ಮಶಾನಕ್ಕಾಗಿ ಸಾಕಷ್ಟು ಜಮೀನನ್ನು ದೊರೆಕಿಸಿ ಕೊಡಲು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಸೂಚನೆ ನೀಡಿರುತ್ತದೆ. ಇತ್ತೀಚೆಗೆ ಅಂದರೆ ಆಗಸ್ಟ್ 1992ರಲ್ಲಿ, ಸರ್ಕಾರಿ ಜಮೀನಿನಲ್ಲಿ ಸ್ಮಶಾನದ ಸ್ಥಳಗಳಿಗೆ ಜಮೀನನ್ನು ಒದಗಿಸಲು ಸರ್ಕಾರವು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿರುತ್ತದೆ. ಒಂದು ವೇಳೆ ಎಲ್ಲಾ ಕೋಮಿನ ಜನಾಂಗದವರಿಗೂ ಸ್ಮಶಾನಕ್ಕಾಗಿ ಸರ್ಕಾರಿ ಜಮೀನು ಯಾವುದೇ ಗ್ರಾಮದಲ್ಲಿ ಲಭ್ಯವಿಲ್ಲದಿದ್ದರೆ ಅಂತಹ ಪ್ರಸಂಗಗಳಲ್ಲಿ ಖಾಸಗಿ ಜಮೀನನ್ನು ಸದರಿ ಉದ್ದೇಶಕ್ಕೆ ಖರೀದಿಸಲು ಸೂಚಿಸಿರುತ್ತದೆ. ಖಾಸಗಿ ಜಮೀನು ಖರೀದಿಸಲು ಸರ್ಕಾರವು ಒಂದು ಕೋಟಿ ರೂಪಾಯಿ ಹಣವನ್ನು ಮೀಸಲಿಟ್ಟಿದೆ.

ವಿಭಾಗಾಧಿಕಾರಿಗಳ ಹುದ್ದೆಯ ರದ್ದತಿ.

398 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಮಿತವ್ಯಯದ ಅಂಗವಾಗಿ ವಿಭಾಗಾಧಿಕಾರಿಗಳ ಹುದ್ದೆಯನ್ನು ರದ್ದುಪಡಿಸಿರುವುದು ನಿಜವೇ ?